**ಕರ್ನಾಟಕ ಸರ್ಕಾರ**

**ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/54/2014

3 ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. 'ಎ' ಬ್ಲಾಕ್,
ಶಾಂತಿನಗರ, ಬೆಂಗಳೂರು.
ದಿನಾಂಕ: 4 .06.2014

ಗೆ,

1) ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲ ನಿ.,
ರೇಸ್ ಕೋರ್ಸ್ ರಸ್ತೆ,
ಬೆಂಗಳೂರು.

2) ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ
ಮಹಾಮಂಡಲಿ ನಿ.,
ಡಾ.ಎಂ.ಹೆಚ್. ಮರೀಗೌಡ ರಸ್ತೆ,
ಬೆಂಗಳೂರು-29.

3) ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಸಂಘಗಳ ಮಹಾಮಂಡಳ,
ನಿರ್ಮಾನ್ ಭವನ, ಡಾ. ರಾಜ್‌ಕುಮಾರ್ ರಸ್ತೆ, 1ನೇ ಹಂತ,
ರಾಜಾಜಿನಗರ, ಬೆಂಗಳೂರು 560 010

4) ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ,
132, ಕೆ.ಹೆಚ್.ರಸ್ತೆ, ಶ್ರೀನಿವಾಸ ಕಾಲೋನಿ, ಸುಧಾಮನಗರ,
ಬೆಂಗಳೂರು 560 027

ಮಾನ್ಯರೇ,

**ವಿಷಯ:-** ಅಧಿಸೂಚನೆಯನ್ನು ಪ್ರಕಟಣೆಗಾಗಿ ಕಳುಹಿಸುವ ಕುರಿತು.

**ಉಲ್ಲೇಖ:-** ಸುತ್ತೋಲೆ ಸಂಖ್ಯೆ:ಸಚುಆ/ಚುನಾವಣೆ/ಮಾಹಿತಿ/54/2014
ದಿನಾಂಕ: 31.05.2014

***

ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗವು ಉಲ್ಲೇಖಿತ ಸುತ್ತೋಲೆಯನ್ನು ಹೊರಡಿಸಿದ್ದು, ಸದರಿ ಸುತ್ತೋಲೆಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದೆ. ತಮ್ಮ ಮಹಾಮಂಡಳದ ಮುಂದಿನ ಸಂಚಿಕೆಯಲ್ಲಿ ಈ ಸುತ್ತೋಲೆಯನ್ನು ಪ್ರಕಟಿಸಲು ಕೋರಲಾಗಿದೆ.

ತಮ್ಮ ನಂಬುಗೆಯ

(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು

**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಆಯೋಗ**

ಸಂಖ್ಯೆ:ಸಚುಆ/ಚುನಾವಣೆ/ಮಾಹಿತಿ/54/2014

3ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. 'ಎ' ಬ್ಲಾಕ್,
ಶಾಂತಿನಗರ, ಬೆಂಗಳೂರು.
ದಿನಾಂಕ:31.05.2014

## ಸುತ್ತೋಲೆ

**ವಿಷಯ:–** ಸಹಕಾರ ಸಂಘಗಳ /ಸಹಕಾರಿಗಳ ಆಡಳಿತ ಮಂಡಲಿಗೆ ಸಾಮಾನ್ಯ ಚುನಾವಣೆ ಸಂಘಗಳ ಕಾರ್ಯನಿರ್ವಹಣೆ ಸಂಬಂಧ ನೈಜತೆಯನ್ನು ಖಾತ್ರಿಪಡಿಸಿಕೊಳ್ಳಲು ಸಹಕಾರ ಸಂಘಗಳವಾರು ಮತ್ತು ಕ್ರೂಢೀಕೃತ ಮಾಹಿತಿಯನ್ನು ನಿಯಮ 13ಡಿ(1) ರಂತೆ ಸಲ್ಲಿಸುವ ಕುರಿತು.

***

ಕರ್ನಾಟಕ ರಾಜ್ಯದಲ್ಲಿ ಸಹಕಾರ ಚುನಾವಣಾ ಆಯೋಗವು ಅಸ್ತಿತ್ವಕ್ಕೆ ಬಂದ ನಂತರ, ಸಹಕಾರ ಸಂಘಗಳ ಆಡಳಿತ ಮಂಡಳಿ/ ಪದಾಧಿಕಾರಿಗಳ ಆಕಸ್ಮಿಕ ಖಾಲಿ ಸ್ಥಾನಗಳ /ಹೊಸದಾಗಿ ನೋಂದಣಿಯಾದ ಸಹಕಾರ ಸಂಘಗಳ ಆಡಳಿತ ಮಂಡಳಿ /ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವ ಬಗ್ಗೆ ಆಯೋಗವು ಕ್ರಮ ಕೈಗೊಂಡಿರುವ ವಿಷಯ ನಿಮಗೆ ತಿಳಿದಿದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ಪ್ರಕರಣ 39ಎ ಮತ್ತು 39ಎಎ (ಸಂಕ್ಷಿಪ್ತವಾಗಿ ಅಧಿನಿಯ) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 26, 26–ಎ ಗಳ ಅವಕಾಶದಂತೆ, ಸಹಕಾರ ಸಂಘಗಳ /ಸಹಕಾರಿಗಳ ಮಂಡಲಿಗಳ /ಪದಾಧಿಕಾರಿಗಳ ಚುನಾವಣೆಗಳನ್ನು ಆಯೋಗದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಡೆಸತಕ್ಕದ್ದಾಗಿದೆ.

ಸಹಕಾರ ಸಂಘಗಳ ಮಂಡಲಿಗಳ ಚುನಾವಣೆ ಸಂಬಂಧವಾಗಿ ಈ ಹಿಂದೆ ಅಂದರೆ ದಿನಾಂಕ:31.03.2013 ಹಾಗೂ 31.03.2014ಕ್ಕೆ ಸಲ್ಲಿಸಲಾದ ಸಹಕಾರ ಸಂಘಗಳ ಪಟ್ಟಿಯನ್ನು ಗಮನಿಸಿದಾಗ ಕೆಲವು ಪ್ರಕರಣಗಳಲ್ಲಿ ಸ್ಥಗಿತಗೊಂಡ ಕಾರ್ಯನಿರ್ವಹಿಸದ ಅಥವಾ ಈಗಾಗಲೇ ಚುನಾವಣೆ ಆಗಿರುವ ಸಂಘಗಳ ಹೆಸರುಗಳನ್ನು ಪಟ್ಟಿಯಲ್ಲಿ ಸೇರಿಸಿರುವುದನ್ನು ಆಯೋಗ ಗಮನಿಸಿದೆ. ಆಯೋಗದಿಂದ ನೇಮಕಗೊಂಡ ರಿಟರ್ನಿಂಗ್ ಅಧಿಕಾರಿಯು ಸಂಘಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ಸಂಘ ಸ್ಥಗಿತಗೊಂಡಿದೆ ಅಥವಾ ಚುನಾವಣೆ ಈಗಾಗಲೇ ಆಗಿದೆ ಅಥವಾ ಪ್ರಸ್ತುತ ಮಂಡಲಿ ಅವಧಿ ಇನ್ನು ಇದೆ ಈ ರೀತಿ ವರದಿಗಳನ್ನು ಆಯೋಗ ಸ್ವೀಕರಿಸಿದೆ.

ಈ ಹಿನ್ನೆಲೆಯಲ್ಲಿ ಚುನಾವಣೆಗೆ ಬಾಕಿ ಇರುವ ಸಹಕಾರ ಸಂಘಗಳ ಪಟ್ಟಿಯನ್ನು ಸಮರ್ಪಕವಾಗಿ ಪರಿಶೀಲಿಸಿ ಕಳುಹಿಸಬೇಕಿದ್ದು, ಜಿಲ್ಲಾಚುನಾವಣಾಧಿಕಾರಿಯ ಕರ್ತವ್ಯವಾಗಿರುತ್ತದೆ. ಸಹಕಾರ ಸಂಘವು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆಯೆ? ಎಂಬ ಬಗ್ಗೆ ಕೆಳಕಂಡ ಅಂಶಗಳನ್ನು ಗಮನಿಸಬಹುದಾಗಿದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಅಡಿಯಲ್ಲಿ ವ್ಯಾಪ್ತಿಯ ಸಕ್ಷಮ ನಿಬಂಧಕರಿಂದ ಸಹಕಾರ ಸಂಘವು /ಸಹಕಾರಿಯು ನೋಂದಣಿಯಾಗಿದ್ದು ಅಸ್ತಿತ್ವದಲ್ಲಿದೆ /ಕಾರ್ಯನಿರ್ವಹಿಸುತ್ತಿದೆ ಎಂದು ಸಮರ್ಥಿಸಬೇಕಾದಲ್ಲಿ ಅಧಿನಿಯಮಗಳಲ್ಲಿನ ಹಲವಾರು ಅಂಶಗಳ ಬಗ್ಗೆ ಗಮನಿಸತಕ್ಕದ್ದಾಗಿದೆ. ಅವುಗಳನ್ನು ಗಮನಿಸಿ ಪರಿಶೀಲಿಸುವುದರಿಂದ ಸಂಘವು ಕಾರ್ಯನಿರ್ವಹಿಸುತ್ತಿದೆಯೆ? ಅಥವಾ ಸ್ಥಗಿತಗೊಂಡಿದಿಯೆ? ಎಂಬ ಅಂಶವನ್ನು ತಿಳಿಯಬಹುದಾಗಿದೆ.

1) ಸಹಕಾರ ಸಂಘವು /ಸಹಕಾರಿಯು ನೋಂದಣಿಯಾಗಿರುವ ಬಗ್ಗೆ ನೋಂದಣಿ ಪ್ರಮಾಣ ಪತ್ರ (Certificate of Registration) ಮತ್ತು ನೋಂದಾಯಿತ ಮೂಲ ಉಪವಿಧಿಗಳನ್ನು ನೋಂದಣಿ ಪ್ರಾಧಿಕಾರ / ನಿಬಂಧಕರು ನೀಡುತ್ತಾರೆ. ಸಹಕಾರ ಸಂಘವು /ಸಹಕಾರಿಯು ನೋಂದಣಿಯಾಗಿದೆ ಎಂಬುದಕ್ಕೆ ಇದೇ ದಾಖಲೆಯಾಗುತ್ತದೆ. [ಕರ್ನಾಟಕ ಸಹಕಾರ ಸಂಘ ಅಧಿನಿಯಮ ಪ್ರಕರಣ 7, 8 ಮತ್ತು ಸೌಹಾರ್ದ ಸಹಕಾರಿ ಅಧಿನಿಯಮ ಪ್ರಕರಣ 5, 6]

ಅಧಿನಿಯಮ ಪ್ರಕರಣ 113 ರೀತ್ಯಾ ಪ್ರತಿ ಸಹಕಾರ ಸಂಘವು ಕಛೇರಿ /ನೋಂದಾಯಿತ ವಿಳಾಸವನ್ನು ಹೊಂದಿರತಕ್ಕದ್ದಾಗಿದೆ. ವಿಳಾಸದಲ್ಲಿ ಯಾವುದೇ ಬದಲಾವಣೆ ಆದಲ್ಲಿ ಬದಲಾವಣೆ ಆದ 30 ದಿವಸಗಳ ಒಳಗೆ ನಿಬಂಧಕರಿಗೆ ತಿಳಿಸತಕ್ಕದ್ದಾಗಿದೆ.

2) ಸಂಘವು ನೋಂದಾಯಿತ ವಿಳಾಸದಲ್ಲಿ ಕಟ್ಟದ ಹೊರಭಾಗ ವಿಳಾಸವನ್ನು ಹೊಂದಿರತಕ್ಕದ್ದಾಗಿದೆ. ಸಾರ್ವಜನಿಕರು /ಸದಸ್ಯರಿಗೆ ಕಾಣುವ ಹಾಗೆ ಸಂಘದ ನೋಂದಾಯಿತ ಹೆಸರನ್ನುಳ್ಳ ನಾಮಫಲಕ ಹಾಕಿರತಕ್ಕದ್ದು. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 13–ಡಿ ರೀತ್ಯಾ ಜಿಲ್ಲಾ ಚುನಾವಣಾಧಿಕಾರಿಯು, ಸಮರ್ಪಕ ಪರಿಶೀಲನೆಯ ನಂತರ ಚುನಾವಣೆ ನಡೆಸಲು ಬಾಕಿ ಇರುವ ಸಹಕಾರ ಸಂಘಗಳ /ಸಹಕಾರಿಗಳ ಕ್ರೋಢೀಕೃತ ಪಟ್ಟಿಯನ್ನು ಸಹಕಾರ ಚುನಾವಣಾ ಆಯೋಗಕ್ಕೆ ಮಂಡಲಿಗಳ ಅವಧಿ ಮುಗಿಯುವುದಕ್ಕೆ ಕನಿಷ್ಟ 120 ದಿವಸಗಳು ಮುಂಚಿತವಾಗಿ ಸಲ್ಲಿಸತಕ್ಕದ್ದಾಗಿದೆ. ಈ ಪಟ್ಟಿಯಲ್ಲಿ ಈ ಕೆಳಕಂಡ ವಿವರಗಳು ಇರತಕ್ಕದ್ದಾಗಿದೆ.

- ಸಹಕಾರ ಸಂಘದ ಹೆಸರು ಮತ್ತು ವಿಳಾಸ
- ಆಡಳಿತ ಮಂಡಲಿಯ ಚುನಾಯಿತ ನಿರ್ದೇಶಕರ ಸಂಖ್ಯೆ
- ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾಗುವ ದಿನಾಂಕ
- ಚುನಾವಣೆಗಳನ್ನು ನಡೆಸಬಹುದಾದ ಸ್ಥಳ ಹಾಗೂ ಚುನಾವಣಾ ಆಯೋಗಕ್ಕೆ ಅವಶ್ಯವಿರುವ ಇತರೆ ಮಾಹಿತಿಗಳು – ಚುನಾವಣಾ ಆಯೋಗಕ್ಕೆ ಅವಶ್ಯವಿರುವ ಮಾಹಿತಿಗಳನ್ನು ಸಲ್ಲಿಸುವ ಬಗ್ಗೆ ಈ ಸುತ್ತೋಲೆಗೆ ಲಗತ್ತಿಸಿರುವ ನಮೂನೆಯಲ್ಲಿ ವಿವರಗಳನ್ನು ನೀಡುವುದು.

3) ಅಧಿನಿಯಮ ಪ್ರಕರಣ 122 ರ ರೀತ್ಯಾ ಸಹಕಾರ ಸಂಘದಲ್ಲಿ ಇಟ್ಟಿರುವ ಯಾವುದೇ ರಿಜಿಸ್ಟರ್ ಅಥವಾ ಸದಸ್ಯರ ಅಥವಾ ಷೇರುಗಳ ಪಟ್ಟಿಯಲ್ಲಿ ಈ ಕೆಳಕಂಡ ಯಾವುದೇ ವಿವರಗಳನ್ನು ದಾಖಲಿಸಿದ್ದಲ್ಲಿ ಅದು ಮೊದಲ ನೋಟಕ್ಕೆ ಸಾಕ್ಷಿಯಾಗುತ್ತದೆ. (Prima facie evidence)

- ಯಾವುದೇ ವ್ಯಕ್ತಿಯ ಹೆಸರನ್ನು ಆ ರಿಜಿಸ್ಟರ್‌ನಲ್ಲಿ ಸದಸ್ಯ ಎಂದು ದಾಖಲಿಸಿದ ದಿನಾಂಕ
- ಅಂತಹ ವ್ಯಕ್ತಿಯ ಸದಸ್ಯತ್ವ ರದ್ದಾದ ದಿನಾಂಕ

4) ಸಹಕಾರ ಸಂಘಗಳ ನಿರ್ವಹಿಸಬೇಕಾಗುವ ಲೆಕ್ಕಗಳು ಮತ್ತು ಇತರ ಪುಸ್ತಕಗಳು ಕುರಿತಂತೆ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 29 ರಲ್ಲಿ ಸ್ಪಷ್ಟಪಡಿಸಲಾಗಿದೆ. ಸಂಘದ ಆಡಳಿತ ಮಂಡಲಿಯು, ಸಂಘದ ಜಮಾ – ಖರ್ಚು, ಆದಾಯ –ವೆಚ್ಚದ ತಃಖ್ತೆ, ಲಾಭ ಮತ್ತು ನಷ್ಟ ಮತ್ತು ಷೆಡ್ಯೂಲ್‌ಗಳೊಡನೆ ಆಸ್ತಿ ಜವಾಬ್ದಾರಿ ತಃಖ್ತೆಗಳು ಮತ್ತು ಇತರ ತಃಖ್ತೆಗಳು ಮುಂತಾದ ವಾರ್ಷಿಕ ಆರ್ಥಿಕ ತಃಖ್ತೆಗಳನ್ನು, ಸಹಕಾರಿ ವರ್ಷ ಮುಕ್ತಾಯಗೊಂಡ 30 ದಿವಸಗಳ ಒಳಗೆ ಸಲ್ಲಿಸುವ ಬಗ್ಗೆ ಕ್ರಮವಿಡತಕ್ಕದ್ದಾಗಿದೆ.

5) ಅಧಿನಿಯಮ ಪ್ರಕರಣ 29–ಜಿ ನ ಅಂಶಗಳಿಗೆ ಒಳಪಟ್ಟು ಪ್ರತಿ ಸಹಕಾರ ಸಂಘದಲ್ಲೂ ಮುಖ್ಯಕಾರ್ಯನಿವಾಹಕರು ಇರತಕ್ಕದ್ದಾಗಿದ್ದು, ಇವರು ಸಂಘದಿಂದ ನೇಮಿಸಲ್ಪಡುವ ಮತ್ತು ತೆಗೆದು ಹಾಕಲ್ಪಡುವವರಾಗಿರುತ್ತಾರೆ.

6) ಸಹಕಾರ ಸಂಘದ ಆಡಳಿತ ಮಂಡಲಿಯು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14 ಎಜೆ(1)ರ ಪ್ರಕಾರ ಪ್ರತಿ ವರ್ಷದ ಸೆಪ್ಟೆಂಬರ್ 25 ರ ಒಳಗೆ ಪ್ರಕರಣ 27 ರಲ್ಲಿ ವಿವರಿಸಿರುವಂತೆ ವ್ಯವಹಾರ ನಡೆಸಲು ವಾರ್ಷಿಕ ಮಹಾಸಭೆಯನ್ನು ನಡೆಸತಕ್ಕದ್ದಾಗಿದೆ. ನಿಯಮ 14ಎಜೆ(14) ರೀತ್ಯಾ ಸಂಘದ ಮುಖ್ಯ ಕಾರ್ಯನಿರ್ವಾಹಕನು ವಾರ್ಷಿಕ ಮಹಾಸಭೆಯ ಸಭೆಯ ನಡವಳಿಯ ದೃಢೀಕೃತ ಪ್ರತಿಯನ್ನು ಸಕ್ಷಮ ನಿಬಂಧಕರಿಗೆ ಮತ್ತು ಆರ್ಥಿಕ ನೆರವು ನೀಡುವ ಬ್ಯಾಂಕಿಗೆ ಸಭೆ ನಡೆದ 3 ದಿವಸಗಳ ಒಳಗೆ ಸಲ್ಲಿಸತಕ್ಕದ್ದಾಗಿದೆ ಮತ್ತು ನಡವಳಿಯ ದೃಢೀಕೃತ ಪ್ರತಿಯನ್ನು ಸಂಘದ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸತಕ್ಕದ್ದು,

--3

7) ಸಂಘದ ಆಡಳಿತ ಮಂಡಳಿ ಅಧಿಕಾರ ಮತ್ತು ಕರ್ತವ್ಯಗಳ ಕುರಿತು ಅಧಿನಿಯಮ ಪ್ರಕರಣ 28-ಸಿ(2)ರಲ್ಲಿ ವಿವರಿಸಲಾಗಿದೆ. ನಿಯಮ 14ಎಕೆಯಲ್ಲಿ ವಿವರಿಸಿದಂತೆ ಸಂಘದಲ್ಲಿ ಆಡಳಿತ ಮಂಡಲಿ ಸಭೆಗಳನ್ನು ನಡೆಸತಕ್ಕದ್ದಾಗಿದೆ ನಿರಂತರವಾಗಿ ನಡೆಯುವ 2 ಸಭೆಗಳ ಅವಧಿ 3 ತಿಂಗಳಿಗಿಂತ ಹೆಚ್ಚಾಗಬಾರದು. ಈ ರೀತಿ ನಡೆಸಿದ ಸಭೆಯ ನಡವಳಿಯ ಪ್ರತಿಯನ್ನು ಸಭೆ ನಡೆಸಿದ ದಿನಾಂಕದಿಂದ 7 ದಿನಗಳ ಒಳಗೆ ಸಂಘದ ಎಲ್ಲಾ ನಿರ್ದೇಶಕರಿಗೆ ಕಳುಹಿಸತಕ್ಕದ್ದು ಎಂದು ನಿಯಮ 14ಎಕೆ(9) ರಲ್ಲಿ ವಿವರಿಸಲಾಗಿದೆ.

8) ಸಂಘದ ಮುಖ್ಯ ಕಾರ್ಯನಿರ್ವಾಹಕರ ನೇಮಕಾತಿ ಬಗ್ಗೆ ಅಧಿನಿಯಮ ಪ್ರಕರಣ 29 ಜಿ ನಲ್ಲಿ ವಿವರಿಸಲಾಗಿದೆ. ಅಧಿನಿಯಮ ಪ್ರಕರಣ 29ಜಿ(6) ರೀತ್ಯಾ ಪ್ರಾಥಮಿಕ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ, ಸಂಘದ ಮುಖ್ಯ ಕಾರ್ಯನಿರ್ವಾಹಕನು ಪ್ರತಿ ಮಾಹೆ ದೃಢೀಕೃತ ಜಮಾ-ಖರ್ಚು ಲೆಕ್ಕಗಳ ವಿವರಗಳನ್ನು ನಿಬಂಧಕರಿಗೆ /ಆರ್ಥಿಕ ನೆರವು ನೀಡುವ ಬ್ಯಾಂಕ್‌ಗೆ, ಮುಂದಿನ ಮಾಹೆಯ 15 ದಿನದೊಳಗೆ ಕಳುಹಿಸತಕ್ಕದ್ದಾಗಿದೆ. ಅಲ್ಲದೇ ಸಂಘದ ವಾರ್ಷಿಕ ಮಹಾಸಭೆಯ ಹಾಗೂ ಆಡಳಿತ ಮಂಡಲಿ ನಡವಳಿಗಳ ದೃಢೀಕೃತ ಪ್ರತಿಯನ್ನು ವ್ಯಾಪ್ತಿಯ ನಿಬಂಧಕರಿಗೆ ಮತ್ತು ಆರ್ಥಿಕ ನೆರವು ನೀಡುವ ಬ್ಯಾಂಕ್‌ಗೆ ಸಭೆಯು ನಡೆದ 15 ದಿನಗಳೊಳಗೆ ಸಲ್ಲಿಸತಕ್ಕದ್ದು ಎಂದಿರುತ್ತದೆ.

9) ಸಂಘದ ಲೆಕ್ಕಪತ್ರಗಳನ್ನು ಅಧಿನಿಯಮ ಪ್ರಕರಣ 63 ರಂತೆ ಆಡಿಟ್ ಮಾಡಿಸುವ ಸಂಬಂಧ ಜಮಾ ಖರ್ಚು, ವ್ಯಾಪಾರ ತಃಖ್ತೆ, ಲಾಭ ನಷ್ಟ ತಃಖ್ತೆ, ಆಸ್ತಿ-ಜವಾಬ್ದಾರಿ ತಃಖ್ತೆಗಳನ್ನು ಸಿದ್ದಪಡಿಸಿ ಸಲ್ಲಿಸುವಿಕೆ.

10) ಸಂಘವು ಯಾವ ಉದ್ದೇಶಕ್ಕಾಗಿ ಸ್ಥಾಪನೆಯಾಯಿತೋ ಆ ಉದ್ದೇಶಗಳ ಬಗ್ಗೆ ಉಪ ವಿಧಿಗಳಲ್ಲಿ ವಿವರಿಸಲಾಗಿದ್ದು ಅದನ್ನು ಗಮನದಲ್ಲಿಟ್ಟುಕೊಂಡು ಸಂಘದ ಸದಸ್ಯರಿಗೆ ಸೇವೆಯನ್ನು ಒದಗಿಸತಕ್ಕದ್ದಾಗಿದೆ. ಅಲ್ಲದೇ ಕಾರ್ಯನಿರತ ಸಂಘವು ಅಧಿನಿಯಮ /ನಿಯಮ / ಉಪವಿಧಿಗಳ ಅವಕಾಶದಂತೆ ಶಾಸನಾತ್ಮಕವಾಗಿ ನಿಗಧಿತ ಅವಧಿಯಲ್ಲಿ ಮೇಲೆ ಕೆಲವು ವಿಷಯಗಳ ಬಗ್ಗೆ ವಿವರಿಸಿದಂತೆ ಕಾರ್ಯನಿರ್ವಹಣೆ ಮಾಡಿ ವ್ಯವಹಾರ ಮಾಡತಕ್ಕದ್ದಾಗಿರುತ್ತದೆ.

11) ಅಧಿನಿಯಮ ಪ್ರಕರಣ 72 (2) ರಂತೆ ಸಂಘವು ನೋಂದಣಿಯಾದ ದಿನಾಂಕದಿಂದ 6 ತಿಂಗಳ ಒಳಗೆ ಕಾರ್ಯನಿರ್ವಹಣೆ ಮಾಡದಿದ್ದಲ್ಲಿ, ಅಥವಾ 6 ತಿಂಗಳು ಕಾರ್ಯನಿರ್ವಹಿಸದೆ ಸ್ಥಗಿತಗೊಂಡಲ್ಲಿ, ನೋಂದಣಿ ಮತ್ತು ಆಡಳಿತ ನಿರ್ವಹಣೆ ಸಂಬಂಧ, ಅಧಿನಿಯಮ /ನಿಯಮಗಳು /ಉಪವಿಧಿಗಳನ್ವಯ ಕಾರ್ಯನಿರ್ವಹಿಸುವಲ್ಲಿ ವಿಫಲವಾದಲ್ಲಿ, ಅಂತಹ ಸಂಘವನ್ನು ನಿಬಂಧಕರು ದುಂಡುಸುತ್ತುವ (Winding up) ಬಗ್ಗೆ ಸ್ವಯಂ ಪ್ರೇರಿತವಾಗಿ ಆದೇಶ ಹೊರಡಿಸಲು ಅಧಿಕಾರವಿರುತ್ತದೆ.

12) ಸಂಘವು ನ್ಯಾಯಬೆಲೆ ಅಂಗಡಿ /ಗ್ರಾಹಕರ ವಸ್ತುಗಳ ವಿತರಣೆ/ಪ್ಲೋರ್‌ಮಿಲ್ /ಪರಿಷ್ಕರಣಾ ಚಟುವಟಿಕೆಗಳು, ಸೀಮೆಎಣ್ಣೆ ಇತ್ಯಾದಿ ವ್ಯಾಪಾರ ವಹಿವಾಟು ನಡೆಸುವುದಾದಲ್ಲಿ ಹಲವಾರು ಪ್ರಕರಣಗಳಲ್ಲಿ ಕಾರ್ಯನಿರತ ಸಂಘಗಳು ಕಾನೂನಿಗೆ ಅನುಗುಣವಾಗಿ ವಿವಿಧ ಇಲಾಖೆ/ ಸ್ಥಳೀಯ ಪ್ರಾಧಿಕಾರಗಳಿಂದ ಪರವಾನಗಿ ಪಡೆಯಬೇಕಾಗುತ್ತದೆ, ಪರವಾನಗಿಯನ್ನು ಷರತ್ತುಗಳಂತೆ ನಿಗಧಿತ ಅವಧಿಯಲ್ಲಿ ನವೀಕರಿಸಿಕೊಳ್ಳಬೇಕಾಗುತ್ತದೆ.

13) ಸಾರ್ವಜನಿಕ ಹಿತದೃಷ್ಟಿ /ಸಂಘದ ಹಿತದೃಷ್ಟಿಯಿಂದ ಸರ್ಕಾರ /ನಿಬಂಧಕರು ನೀಡುವ ನಿರ್ದೇಶನಗಳನ್ನು ಪಾಲಿಸದಿರುವಿಕೆ.

ಸಂಘವು ಅಧಿನಿಯಮ /ನಿಯಮ /ಕಾನೂನಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿದೆಯೆ? ಎಂಬ ಬಗ್ಗೆ ಮೇಲಿನ ಕೆಲವು ಅಂಶಗಳನ್ನು ಪರಿಶೀಲಿಸುವುದರಿಂದ ತಿಳಿಯಬಹುದಾಗಿದೆ. ದಿನಾಂಕ:31.03.2013 ಹಾಗೂ ದಿನಾಂಕ:31.03.2014ಕ್ಕೆ ಆಡಳಿತ ಮಂಡಳಿ ಅವಧಿ ಮುಗಿದ ಸಹಕಾರ ಸಂಘಗಳ ಚುನಾವಣೆ ನಡೆಸುವ ಸಂದರ್ಭದಲ್ಲಿ ಹಲವಾರು ಸಂಘಗಳು ಅಸ್ತಿತ್ವದಲ್ಲಿ ಇಲ್ಲದೇ ಇರುವುದು ಮತ್ತು ಅವುಗಳ ದಾಖಲಾತಿ ಲಭ್ಯವಿಲ್ಲದಿರುವುದು ಕಾರ್ಯದರ್ಶಿ ಅಥವಾ ಯಾವುದೇ ಸಿಬ್ಬಂದಿ ಇಲ್ಲದಿರುವುದು ರಿಟರ್ನಿಂಗ್ ಅಧಿಕಾರಿಗಳ ಗಮನಕ್ಕೆ ಬಂದಿದ್ದು, ಆಯೋಗಕ್ಕೆ ವರದಿ ಸಲ್ಲಿಸಿ ಮಾರ್ಗದರ್ಶನ ಕೋರಿರುತ್ತಾರೆ. ಈ ರೀತಿ ಸ್ವೀಕರಿಸಲಾದ ವರದಿಗಳನ್ನು ಜಿಲ್ಲಾ ಚುನಾವಣಾಧಿಕಾರಿಗಳಿಗೆ ಕಳುಹಿಸಿ, ನಿಯಮಗಳ ಅನುಸಾರ ಕ್ರಮ ಕೈಗೊಂಡು ವರದಿಸುವಂತೆ ತಿಳಿಸಲಾಗಿತ್ತು. ಆದರೆ ಇದುವರೆಗೆ ಅನೇಕ ಜಿಲ್ಲೆಯಿಂದ ವರದಿ ಬಂದಿರುವುದಿಲ್ಲ.

--4

ಇದರಿಂದ ವ್ಯಕ್ತವಾಗುವುದೇನೆಂದರೆ ಜಿಲ್ಲೆಯಲ್ಲಿ ಚುನಾವಣೆಗೆ ಬಾಕಿಯಿರುವ ಸಹಕಾರ ಸಂಘಗಳ ವಿವರಗಳನ್ನು ಆಯಾ ಸಂಘದ ಮುಖ್ಯಕಾರ್ಯನಿರ್ವಾಹಣಾಧಿಕಾರಿ ಸಲ್ಲಿಸುವ ಸಂದರ್ಭದಲ್ಲಿ ಯಾವುದೇ ವಿವೇಚನೆಯಿಲ್ಲದೆ /ಪರಿಶೀಲನೆ ಮಾಡದೇ ಕಳಿಸುತ್ತಿರುವುದಾಗಿದೆ. ಈ ಜವಾಬ್ದಾರಿಯನ್ನು ಮುಖ್ಯಕಾರ್ಯನಿರ್ವಾಹಣಾಧಿಕಾರಿ ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ ಮತ್ತು ಇಲಾಖಾ ಅಧಿಕಾರಿಗಳು ವಿವರಗಳನ್ನು ಸರಿಯಾಗಿ ಪರಿಶೀಲನೆ ಮಾಡದೇ ಆಯೋಗಕ್ಕೆ ಕಳಿಸಲಾಗುತ್ತಿದೆ. ಜಿಲ್ಲಾ ಉಪ ನಿಬಂಧಕರು ಚುನಾವಣೆಗೆ ಬಾಕಿ ಇರುವ ಸಂಘಗಳ ಮಾಹಿತಿಯನ್ನು ಸರಿಯಾಗಿ ಪರಿಶೀಲಿಸಿ ಸಲ್ಲಿಸುತ್ತಿಲ್ಲವೆಂಬುದು ದೃಡಪಡುತ್ತದೆ.

ಅಧಿನಿಯಮ ಪ್ರಕರಣ 39ಎ (2) ರ ಅವಕಾಶದಂತೆ ಪ್ರಸ್ತುತ ದಿನಾಂಕ:31.03.2015ಕ್ಕೆ ಬಾಕಿಯಾಗುವ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಬಗ್ಗೆ 6 ತಿಂಗಳು ಮುಂಚಿತವಾಗಿ ಪೂರ್ವಸಿದ್ಧತೆ ಮಾಡಿಕೊಳ್ಳಬೇಕಾಗಿರುತ್ತದೆ. ನಿಯಮ 13ಡಿ ರೀತ್ಯಾ ಜಿಲ್ಲಾ ಚುನಾವಣಾಧಿಕಾರಿಯವರ ವ್ಯಾಪ್ತಿಯ ಸಹಕಾರ ಸಂಘಗಳ ಮಂಡಳಿಯ ಅವಧಿಯು ಮುಗಿಯುವ 120 ದಿವಸಗಳಿಗೆ ಮುಂಚೆ ಚುನಾವಣೆಗೆ ಬಾಕಿ ಇರುವ, ಪರಿಶೀಲನೆ ಮಾಡಿದ ಅರ್ಹ ಕಾರ್ಯನಿರತ ಸಹಕಾರ ಸಂಘಗಳ ಕ್ರೋಢೀಕೃತ ಪಟ್ಟಿಯನ್ನು ಸಹಕಾರ ಚುನಾವಣಾ ಆಯೋಗಕ್ಕೆ ಸಲ್ಲಿಸತಕ್ಕದ್ದಾಗಿದೆ.

ಈ ಹಿನ್ನೆಲೆಯಲ್ಲಿ ಸಂಘವಾರು /ಕ್ರೋಢೀಕೃತ ಮಾಹಿತಿಯನ್ನು ಆಯೋಗಕ್ಕೆ ಆಗಸ್ಟ್ 2014 ರ ಒಳಗಾಗಿ ಸಲ್ಲಿಸುವಂತೆ ಕೋರಿದೆ. ಚುನಾವಣೆಗೆ ಬಾಕಿ ಇರುವ ಸಂಘಗಳು ಎಂದು ಕಳುಹಿಸುವ ಪಟ್ಟಿಯಲ್ಲಿ ಯಾವುದೇ ನ್ಯೂನತೆ /ಲೋಪದೋಷಗಳು ಆಯೋಗದ ಗಮನಕ್ಕೆ ಬಂದಲ್ಲಿ ವ್ಯಾಪ್ತಿಯ ಸಂಬಂಧಿಸಿದ ಅಧಿಕಾರಿಗಳನ್ನೇ, ಹೊಣೆಗಾರರನ್ನಾಗಿ ಮಾಡಲಾಗುವುದು ಆದುದರಿಂದ ಈ ಪತ್ರಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ಮಾಹಿತಿಯನ್ನು ಸಂಘವಾರು ಹಾಗೂ ಕ್ರೂಢೀಕರಿಸಿ ಸಿದ್ಧಪಡಿಸಿ ಸಲ್ಲಿಸುವಂತೆ ಕೋರಿದೆ.

31/05/14

**(ಎನ್.ಸಿ. ಮುನಿಯಪ್ಪ)**
**ಸಹಕಾರ ಚುನಾವಣಾ ಆಯುಕ್ತರು**
**ಬೆಂಗಳೂರು**

**ಇವರಿಗೆ:-**

1) ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರು
2) ಎಲ್ಲಾ ಉಪ ವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು
3) ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು

**ಪ್ರತಿಗಳು:-**

ಸಹಕಾರ ಸಂಘಗಳ ಅಪರ ನಿಬಂಧಕರು, ವಸತಿ ಮತ್ತು ಇತರೆ /ಬಳಕೆ ಮತ್ತು ಮಾರಾಟ/ ಕೈಗಾರಿಕೆ ಮತ್ತು ಹೈನುಗಾರಿಕೆ /ಪತ್ತು, ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು.

**ಸಹಕಾರ ಸಂಘಗಳ ನಿಯಮ 13(ಡಿ) (1) ರಂತೆ ಜಿಲ್ಲಾ ಚುನಾವಣಾಧಿಕಾರಿಗಳು ಚುನಾವಣೆಗೆ ಬಾಕಿ ಇರುವ ಎಲ್ಲಾ ಸಹಕಾರ ಸಂಘಗಳ (ಸಂಘಗಳವಾರು ಮತ್ತು ಕ್ರೋಢೀಕೃತ) ಮಾಹಿತಿಯನ್ನು ಸಲ್ಲಿಸುವ ನಮೂನೆ**

| | | |
|---|---|---|
| 1 | ಸಹಕಾರ ಸಂಘದ ಹೆಸರು, ನೋಂದಣಿ ಸಂಖ್ಯೆ, ದಿನಾಂಕ, ಪೂರ್ಣ ವಿಳಾಸ ಮತ್ತು ಕಛೇರಿಯ ಕೆಲಸದ ವೇಳೆ | |
| 2 | ಸಂಘದ ಕಾರ್ಯವ್ಯಾಪ್ತಿ | |
| 3 | ಸಂಘದ ಮುಖ್ಯ ಉದ್ದೇಶಗಳು | |
| 4 | ಸಂಘವು ಕಾರ್ಯನಿರತವಾಗಿದೆಯೇ? ಹೌದಾದಲ್ಲಿ ಕಳೆದ ಐದು ವರ್ಷಗಳ ಕಾರ್ಯಾಚರಣೆ ವಿವರಗಳು<br>1) ಒಟ್ಟು ಸದಸ್ಯರ ಸಂಖ್ಯೆ<br>2) ಸಾಲ ನೀಡಿಕೆ /ವಹಿವಾಟು<br>3) ಲಾಭ /ನಷ್ಟ<br>4) ನಡೆಸಿದ ಆಡಳಿತ ಮಂಡಲಿ ಸಭೆಗಳು (ಸಂಖ್ಯೆ /ದಿನಾಂಕ)<br>5) ಸಾಮಾನ್ಯ ಸಭೆ ನಡೆಸಿದ ವಿವರಗಳು (ಸಂಖ್ಯೆ /ದಿನಾಂಕ)<br>6) ಸಂಘದ ಲೆಕ್ಕಪರಿಶೋಧನೆ ಆಗಿರುವ ವರ್ಷ ಮತ್ತು ಶ್ರೇಣಿ | |
| 5 | ಉಪವಿಧಿಗಳ ಪ್ರಕಾರ ಆಡಳಿತ ಮಂಡಲಿಯ ಚುನಾಯಿತ ನಿರ್ದೇಶಕರ ಸಂಖ್ಯೆ | |
| 6 | ಹಾಲಿಯಿರುವ ಆಡಳಿತ ಮಂಡಳಿಯ ಚುನಾವಣೆ ದಿನಾಂಕ ಮತ್ತು ಪದಾವಧಿಯು ಮುಕ್ತಾಯವಾಗುವ ದಿನಾಂಕ | |
| 7 | ಪದಾಧಿಕಾರಿಗಳು ಆಯ್ಕೆಯಾದ ದಿನಾಂಕ | |
| 8 | ಚುನಾವಣೆ ನಡೆಸಲು ಗೊತ್ತು ಪಡಿಸಿದ ಸ್ಥಳ ಮತ್ತು ವಿಳಾಸ | |
| 9 | ಸಂಘವು ಸ್ವಂತ ಕಟ್ಟಡ ಹೊಂದಿರುವ ಬಗ್ಗೆ ಮತ್ತು ಸದರಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ವಿವರಗಳು | |
| 10 | ಸಂಘವು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ, ಈ ಬಗ್ಗೆ ವಿವರಗಳು | |
| 11 | ಚುನಾವಣೆ ನಡೆಸಲು ಚುನಾವಣಾ ಆಯೋಗಕ್ಕೆ ವರದಿಸಲು ಕೈಗೊಂಡ ಆಡಳಿತ ಮಂಡಲಿಯ ನಿರ್ಣಯದ ಸಂಖ್ಯೆ, ದಿನಾಂಕ, ಹಾಜರಾದ ಆಡಳಿತ ಮಂಡಲಿ ಸದಸ್ಯರ ಸಂಖ್ಯೆ ವಿವರ ಮತ್ತು ನಡವಳಿ ಪ್ರತಿ ಲಗತ್ತಿಸುವುದು. | |
| 12 | ಸಂಘವು ಸ್ಥಗಿತಗೊಂಡಿದ್ದಲ್ಲಿ /ಸ್ಥಗಿತಗೊಂಡ ದಿನಾಂಕ, ಕೈಗೊಂಡ ಕ್ರಮ ಮತ್ತು ಸಮಾಪನಗೊಳಿಸಿದ್ದಲ್ಲಿ ಸಮಾಪನಗೊಳಿಸಿದ ಆದೇಶದ ಸಂಖ್ಯೆ, ದಿನಾಂಕ ಮತ್ತು ಸಮಾಪನೆ ಕಾರ್ಯ ಪೂರ್ಣಗೊಳಿಸಲು ನಿಗಧಿಪಡಿಸಿದ ಅವಧಿ | |
| 13 | ಸಂಘವನ್ನು ಪುನಃಶ್ಚೇತನಗೊಳಿಸಿದ್ದಲ್ಲಿ /ಪುನಃಶ್ಚೇತನಗೊಳಿಸಿದ ಉದ್ದೇಶದ ವಿವರಗಳು ಹಾಗೂ ಕಾರ್ಯಾಚರಣೆ ಪ್ರಾರಂಭಿಸಿದ ದಿನಾಂಕ | |

ಮೇಲ್ಕಂಡ ಸಂಘದ ವಿವರಗಳನ್ನು ಸಹಕಾರ ಸಂಘಗಳ ನಿಯಮ 29ಜಿ4(ಎಫ್) ರಂತೆ ನನ್ನ ವಶದಲ್ಲಿರುವ ಸಂಘದ ದಾಖಲಾತಿಗಳಿಂದ ಸರಿಯಾದ ಮಾಹಿತಿ ತಯಾರಿಸಿ, ಪರಿಶೀಲನಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ ಎಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ:
ಸ್ಥಳ:

ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಹೆಸರು
ಸಹಿ ಮತ್ತು ಮೊಹರು

ಸಂಘದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ವಶದಲ್ಲಿರುವ ದಾಖಲಾತಿಗಳಿಂದ ಸಲ್ಲಿಸಿರುವ ವಿವರಗಳನ್ನು ಪರಿಶೀಲಿಸಿರುತ್ತೇನೆ ಮತ್ತು ಸದರಿ ವಿವರಗಳು ಸಂಘದ ದಾಖಲಾತಿಗಳ ಪ್ರಕಾರ ಸರಿಯಾಗಿರುತ್ತದೆ ಎಂದು ದೃಢೀಕರಿಸುತ್ತೇನೆ.

ಪರಿಶೀಲನಾಧಿಕಾರಿ ಹೆಸರು
ಪದನಾಮ ಮತ್ತು ಮೊಹರು

ದಿನಾಂಕ:
ಸ್ಥಳ: